

# ಯುಗಾದಿ ಎನ್ನುವ ಮಗುವಿನ ಭರವಸೆಯ ಬೆರಳ ಹಿಡಿದು...



**ಸಂತೋಷವೇ ಮೂರ್ತಿವೆತ್ತಂತೆ ಕಾಣಿಸುವ ಮಕ್ಕಳನ್ನು ಬೆಳೆಸುವ ಹೊಣೆಗಾರಿಕೆ ಸುಲಭದ್ದೇನೂ ಅಲ್ಲ. ಯುಗಾದಿ ಎನ್ನುವ ಮಗುವಿನ ಸಖ್ಯವೂ ಅಷ್ಟೇ: ಈ ಮಗುವನ್ನು ನಾವು ಹೇಗೆ ಸ್ವಾಗತಿಸಿ, ಸಲಹುತ್ತೇವೆ ಎನ್ನುವುದರ ಮೇಲೆ ನಮ್ಮ ನಾಳೆಗಳ ನೆಮ್ಮದಿ ನಿರ್ಧಾರವಾಗುತ್ತದೆ.**

■ ಮಹತಿ

ಹೊಸಿತಲಲ್ಲಿ ನಿಂತು ಪಿಳಿಪಿಳಿ ಕಣ್ಣು ಪಿಳುಕಿಸುತ್ತಿರುವ ಕಂದಮ್ಮನಂತೆ ಹೊಸ ಸಂವತ್ಸರ 'ಶೋಭಾಕೃತ' ಕಾಣಿಸುತ್ತಿದೆ. ಕಾಲವೆನ್ನುವ ಕಂದಮ್ಮನನ್ನು ಬೇಡ ಎಂದು ತಡೆಯಲು ನಾವ್ಯಾರು? ಅಷ್ಟಕ್ಕೂ ಕಂದಮ್ಮನನ್ನು ಬೇಡವೆನ್ನುವವರಾದರೂ ಯಾರು? ಮಗು ಎಂದರೆ ಕೂಸು ಎಂದರ್ಥ ಮಾತ್ರವಲ್ಲ: ಮಗು ಎನ್ನುವುದು ಭರವಸೆ, ಸಂಭ್ರಮ. ವರ್ತಮಾನದಲ್ಲಿ ಸಂತೋಷ ತುಂಬುವುದರ ಜೊತೆಗೆ, ನಾಳೆಗಳ ಬಗ್ಗೆ ನಿರೀಕ್ಷೆಗಳನ್ನೂ ಉಳಿಸುವುದು ಮಕ್ಕಳೇ ಅಲ್ಲವೇ.

ದೊಡ್ಡವರ ಬೆರಳು ಹಿಡಿದು ಮಕ್ಕಳು ನಡೆಯುತ್ತಾರೆ. ಆದರೆ, ಇದೀಗ ಮಕ್ಕಳ ಬೆರಳ ಹಿಡಿದು ನಾವು ನಡೆಯಬೇಕಾಗಿದೆ. ಇದರರ್ಥ ಇಷ್ಟೇ. ನಾವೀಗ ಮಕ್ಕಳ ಲೋಕವನ್ನು ಮತ್ತೆ ಪ್ರವೇಶಿಸಬೇಕಾಗಿದೆ. ನಾವು ಕಟ್ಟಿಕೊಂಡಿರುವ ಸಮಾಜವನ್ನು ನೋಡಿ: ಎಲ್ಲೆಲ್ಲೂ ಬಿರುಕು, ಹಗೆ. ದುರ್ಬೀನು ಹಾಕಿ ಹುಡುಕಿದರೂ ಕಾಣುವುದು ದುರ್ಲಭ ನಿಷ್ಕಲ್ಮಶ ನಗೆ. ಜಾತಿಗಳ ಹೆಸರಿನಲ್ಲಿ ಗೋಡೆಗಳನ್ನು ಕಟ್ಟಿಕೊಂಡಿದ್ದೇವೆ. ಅಂತಸ್ತುಗಳ ಅಂತರಗಳನ್ನು ರೂಪಿಸಿಕೊಂಡಿದ್ದೇವೆ. ಅಧಿಕಾರ

